




ಏನದು! ಆಹಾ! ಏನದು!
ಮಾಯೆ!
ಎಂದು ಹುಡುಕಿ ಹೊರಟ ಧೀರಾಧಿ
ಧೀರರ ಸಂಗವೇ ಧೀರನಂತೆ
ಬರುವ ಮಾಯೆ.
ಹಿಡಿದೆ! ಗೆದ್ದೆ! ಎಂದು ವಿಜಯೋತ್ಸಾಹದ
ಕೇಕೆಯೊಳಗೆ ಹಸನಾಗಿ ಬೆಸೆಯುವ
ಸೋತಿತೆಂದೆಣಿಸಿದ ಮಾಯೆ
ಮಾಯೆಗೆ ಮಿತ್ರರೇ ಶತ್ರುಗಳು
ಶತ್ರುಗಳೇ ಮಿತ್ರರು
ನಂಜ ನುಂಗಿದ ನಂಜುಂಡೇಶನ
ಗಂಟಲಲ್ಲೇ ಮುಕ್ಕಣ್ಣನ ರೂಪ
ತಳೆಯುವ ಮಾಯೆ

ಠಾಕವ ರೂಪಾಯಿ ನುಂಗಿ
ರೂಪಾಯಿಯ ಎನ್ ನುಂಗಿ
ಎನ್ ನುಂಗಿದ ಯುರೋವನ್ನು
ಯುವನ್ ನುಂಗಿ
ಯುವನ್ ನುಂಗಲು ಭೂಮ್ಯಾಕಾಶ
ಆವರಿಸಿ ಹೂಂಕರಿಸುವ ಡಾಲರ್
ಗಳ ಮಾರ್ವೆಲ್ ಅಶ್ವಯಾಗಕ್ಕೆ
ಅಂವ ಇಂವ ನಾವು ತಾವು
ದೇಶಿ ಪರದೇಶಿಗಳೆಂಬ
ಹಮ್ಮಿನ ಹವಿಸ್ಸೂ ಸಾಕಾಗದ
ದಾಹ.

ಜರ್ಮನಿಯ ಅಲ್ಲಮ
ಆಸ್ಟ್ರಿಯಾದ ಅಲ್ಲಮ
ಕಾಶ್ಮೀರದ ಅಲ್ಲಮ
ಕಾಥೇವಾಡಿ ಮರಾಠವಾಡಿ
ಕಂನಡ ನಾಡ ಅಲ್ಲಮರ ನುಡಿಗೆ
ಹಾರ ತುರಾಯಿ ಸುರಿದು
ಬೀಗುವ ನಮ್ಮೊಳಗೆ
ಮಾಯೆ ಮಾಯೆಯೊಳಗೆ ನಾವು

ಎಲ್ಲಿದೆ ಅನ್ನದ್! ಅನ್ನದ್ ಕಂಡಿರಾ!?

●